| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 116/2019 | | | |
| ಸಾಕ್ಷಿದಾರರ ಹೆಸರು | ಶ್ರೀನಿವಾಸಯ್ಯ | | |
| ತಂದೆ ಹೆಸರು | ಜಿ. ಮುನಿವೆಂಕಟಪ್ಪ | ಪಿಡಬ್ಲ್ಯೂ: | 9 |
| ವಯಸ್ಸು | 65 ವರ್ಷ | ಸಿಡಬ್ಲ್ಯೂ: | 9 |
| ಉದ್ಯೋಗ | ನಿವೃತ್ತ ಪಿ ಎಸ್ ಐ | ಪ್ರಮಾಣ ವಚನ | |
| ವಾಸ ಸ್ಥಳ | ಮುಳಬಾಗಿಲು | ಭೋದಿಸಿದ ದಿನಾಂಕ | 25-01-2024 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನಾನು 2016 ರಿಂದ 2017 ರವರೆಗೆ ಪಿ ಎಸ್ ಐ ಆಗಿ ಚಿಂತಾಮಣಿ ನಗರ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 22-03-17 ರಂದು ಠಾಣಾ ಕರ್ತವ್ಯ ದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ನಮ್ಮ ಠಾಣಾ ಗುನ್ನ ನಂ. 76/2017 ಕಲಂ 417,419,420, 468,471,114 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಮೂಲ ಪಿರ್ಯಾದಿಯನ್ನು ಹಾಗೂ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಅದರ ಪ್ರತಿಗಳನ್ನು ಮಾನ್ಯ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ .

ದಿಃ 03-5-17 ರಂದು ತಾಲ್ಲೂಕು ಕಛೇರಿಯ ಉಪ ನೊಂದಣಾಧಿಕಾರಿಯವರ ಕಛೇರಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ಸೃಷ್ಟಿ ಮಾಡಿಕೊಂಡ ನೊಂದಣಿ ಪತ್ರವನ್ನು ಪಡೆದು ಚಾಸ-6 ಮತ್ತು 7 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಸಮಯ ಬೆಳಗ್ಗೆ 11 ರಿಂದ 11-50 ಗಂಟೆಯವರಿಗೆ ಪಂಚನಾಮೆಯನ್ನು ಜರುಗಿಸಿ ದಾಖಲೆಯನ್ನು ಜಪ್ತುಪಡಿಸಿಕೊಂಡಿರುತ್ತೇನೆ. ದಿಃ27-3-17 ರಂದು ತನಿಖಾಧಿಕಾರಿ ಯವರ ಮುಂದೆ ಹಾಜರರಾಗುವಂತೆ ಆರೋಪಿಗಳಿಗೆ ನೋಟೀಸು ನೀಡಿರುತ್ತೇನೆ. ದಿಃ04-4-17 ರಂದು

ಆರೋಪಿಗಳು ಪೋಲಿಸ್ ಠಾಣೆಗೆ ಹಾಜರಾಗಿದ್ದು ಅವರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. 1 ನೇ ಆರೋಪಿಯ ಮಾದರಿ ಸಹಿಯನ್ನು ಪಡೆದಿರುತ್ತೇನೆ. ಜಪ್ತುಪಡಿಸಿಕೊಂಡ ದಾಖಲೆಗಳ ಬಗ್ಗೆ ನ್ಯಾಯಾಲಯಕ್ಕೆ ಪಿ ಎಫ್ ಬರಾಯಿಸಿಕೊಂಡಿರುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.